**ಕಥೆ**

# ಕಂಡಾಯದೊಡೆಯ ಉಘೇ ಉಘೇ



**ಪ್ರಕಾಶ್ ಪೊನ್ನಾಚಿ**

ಕಲೆ: ಅಕ್ಷಯ ಹೆಗಡೆ ಜಾಲಿಮನೆ

ನಾವು ಮಾಡಿದ ದ್ಯಾವ್ರ ನೀನು
ನಮ್ಗೆ ದ್ಯಾವ್ರು ಅಂತಿಯೇನೋ
ಸಿದ್ದಯ್ಯ ಸ್ವಾಮಿ ಬನ್ನ್ಯೋ...

ಮುಸುಕಿನಲ್ಲೇ ಬೀದಿಯಲ್ಲಿ ಯಾರೋ ಸಿದ್ದಯ್ಯನ ಹಾಡು ಹಾಕಿದ ಸದ್ದು ಪೂಜಾರಿ ಬಸಯ್ಯನ ಕಿವಿಗೆ ಮುಟ್ಟಿತು. 'ಹೋ ಹಾಳಾದ್ ಬೆಳಗಾಯ್ತು. ಇನ್ನು ಈ ಬಡ್ಡಿ ಹೈದನ್ನ ಎಬ್ಬಿ ಕಳ್ಸೋ ಅಷ್ಟ್ರಲ್ಲಿ ನನ್ ಹೆಣ ತೊಳೀತದೆ. ಬಡ್ಡಿವು ಅದೇನ್ ಅಂತ ನನ್ಹೊಟ್ಟೇಲಿ ಹಟ್ಟುಬುಟ್ಟೋ. ಮಕ್ಳು ಅಂತ ಹೇಳೂಕು ನಾಚ್ಗ ಆಯ್ತಾದೆ. ಏನಮ್ಮಿ ಸುಶೀಲ ಆ ಬಡ್ಡಿ ಹೈದನ್ನ ನೀನಾದ್ರು ಹೋಗಿ ಏಳ್ಸು. ಹೊತ್ತುಟ್ಟು ಮಾರುದ್ದ ಬಂದದೆ ಹೋಗ್. ಗುಡಿ ಬಾಗ್ಲು ತೆಗೆ ಅಂತೇಳಮ್ಮಿ. ನಂಗ್ ವಸಿ ಕ್ಯಾಮೆ ಅದೆ ಕಣಾ' ಅಂತ ಬಸಯ್ಯ ಒಂದೇ ಸಮನೆ ಬಡಿದುಕೊಳ್ಳಲಾರಂಭಿಸಿದ.

'ಅಲ್ಲ ಕಣಾ ಆ ನನ್ಮಗ ನಿಮ್ ಮಾತ್ನೆ ಕೇಳ್ದೆ ಇರೋನು ನಾನ್ ಎಬ್ಸುದ್ರೆ ಎದ್ದಾನ. ಗೂಳಿ ಬಿದ್ದಂಗ್ ಬಿದ್ದವ್ನೆ ಎಬ್ಸೋಕೋದ್ರೆ ಕರಿನಾಯಿ ಕಚ್ಕೋಕ್ ಬಂದಂಗ್ ಬತ್ತನೆ. ನಾನ್ ಅವ್ನ್ ತಂಟೆಗೆ ಹೋಗುದಿಲ್ಲ ಮತ್ತೆ' ಎಂದು ಸುಶೀಲಮ್ಮ ಕಡ್ಡಿ ಮುರಿದ ಹಾಗೆ ಹೇಳಿ ಹಿತ್ತಲ ಕಡೆಗೆ ಹೊರಟು ನಿಂತರು.

'ಲೋ ಮಾದೇಸ ಎದ್ದೇಳ್ಲ ಟೇಮಾಗದೆ. ಇವತ್ತು ಕಂಡಾಯ ಎತ್ಕಂಡು ಗುಡ್ರು ಗುಡಿತಾಕ್ ಬತ್ತಾರೆ. ಅಷ್ಟ್ರಲ್ಲಿ ಗುಡಿ ಬಾಗ್ಲು ತೆಗ್ದು ಅವರ್ಗ್ ಪೂಜೆ ಮಾಡ್ಕೊಡ್ಬೇಕು. ನಿಂಗ್ ದಮ್ಮಯ್ಯ ಅಂತೀನಿ ಯೊದ್ದೇಳ್ಲ ಮಗಾ. ಬಡ್ಡಿ ಹೈದ್ನೆ ನಾನ್ ಇನ್ನೆಷ್ಟ್ ದಿನ ಬದಕಾನ್ಲ? ಊರಾಗ್ ಇಲ್ದಿರೋ ಕಾಯ್ಲೆಯೆಲ್ಲ ಬಂದ್ ಅಮಿಕಂಡವೆ. ನನ್ ಕಥೆ ಯಾವಾಗ್ ಏನಾದ್ದೋ. ಬಡ್ಡಿ ಹೈದ್ನೆ ನನ್ ಉತ್ರಾದ್ಕಾರಿ ನೀನೆ ಕಣ್ಲ. ನೀನ್ ಹಿಂಗ್

